# ಶ್ರೀಮಾತೆ ಶಾರದಾದೇವಿ

## (ಕೆಲವು ದೃಶ್ಯಾವಳಿಗಳು)

❖ ರಚನೆ: ಎಚ್.ವಿ. ಸರೋಜ   ಚಿತ್ರ: ಶ್ರೀ ವಿಶ್ವರಂಜನ ಚಕ್ರವರ್ತಿ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ದೃಶ್ಯ ೯

[ಶ್ರೀಶಾರದಾದೇವಿಯವರಿಗೂ ಶ್ರೀರಾಮಕೃಷ್ಣರಿಗೂ ಸಂಭಾಷಣೆ ನಡೆಯುತ್ತಿದೆ. ಶ್ರೀರಾಮಕೃಷ್ಣರು ಮಲಗಿದ್ದಾರೆ. ಶಾರದಾದೇವಿಯವರು ಅವರ ಕಾಲು ಒತ್ತುತ್ತಿದ್ದಾರೆ.]

**ಶಾರದಾದೇವಿ** : ನೀವು ನನ್ನನ್ನು ಯಾವ ದೃಷ್ಟಿಯಿಂದ ಕಾಣುತ್ತಿದ್ದೀರಾ?

**ರಾಮಕೃಷ್ಣರು** : ಕಾಳಿ ದೇವಾಲಯದಲ್ಲಿ ನನ್ನ ಕೈಯಿಂದ ಪೂಜೆ ಮಾಡಿಸಿಕೊಳ್ಳುತ್ತಿರುವ ದೇವಿಯೇ ನಹಬತ್ ಖಾನೆಯಲ್ಲಿ ಇರುವ ದೇವಿ ಹಾಗೂ ಈ ನನ್ನ ಶರೀರಕ್ಕೆ ಜನ್ಮ ಕೊಟ್ಟಿರುವ ಜನ್ಮದಾತೆ. ಅದೇ ತಾಯಿ ಈಗ ನನ್ನ ಕಾಲು ಒತ್ತುತ್ತಿದ್ದಾಳೆ.

[ಶಾರದಾದೇವಿಯವರ ಪಾದಗಳಿಗೆ ನಮಸ್ಕರಿಸುತ್ತಾರೆ.]

**ರಾಮಕೃಷ್ಣರು** : ನೋಡಿ, ನನಗೆ ಈ ಪ್ರಪಂಚದಲ್ಲಿರುವ ಹೆಂಗಸರೆಲ್ಲಾ ದೇವಿಯ ಸಮಾನ. ಆದರೆ ನಾನು ನಿಮ್ಮನ್ನು ಸಹಧರ್ಮಿಣಿಯಾಗಿ ಸ್ವೀಕರಿಸಿರುವುದರಿಂದ, ನೀವು ಈ ಪ್ರಾಪಂಚಿಕ ಜೀವನ ನಡೆಸಬೇಕೆಂದು ಅಪೇಕ್ಷಿಪಟ್ಟರೆ, ನಾನು ಅದರಂತೆ ನಡೆಯಲು ಸಿದ್ಧ. ಆದ್ದರಿಂದ ನಿಮ್ಮ ಅಭಿಪ್ರಾಯವನ್ನು ನಿಸ್ಸಂಕೋಚವಾಗಿ ತಿಳಿಸಿ.

**ಶಾರದಾದೇವಿ** : ನಿಮ್ಮನ್ನು ಪ್ರಾಪಂಚಿಕತೆಯೆಡೆಗೆ ನಾನೇಕೆ ಎಳೆಯಲಿ! ನನ್ನನ್ನು ದಯಮಾಡಿ ಕೈಹಿಡಿದು ಮೇಲೆತ್ತಿ, ನಿಮ್ಮ ಧರ್ಮಪಥದಲ್ಲಿ ನಡೆಯುವಂತೆ ಮಾಡಿ.

**ರಾಮಕೃಷ್ಣರು** : ಆಹಾ! ನನ್ನ ಮನಸ್ಸಿನಲ್ಲಿದ್ದುದನ್ನೇ ನೀವು ನುಡಿದಿದ್ದೀರಿ. ದೇವಿಯು ನನ್ನ ಪ್ರಾರ್ಥನೆಯನ್ನು ನೆರವೇರಿಸಿದ್ದಾಳೆ. ಜೈ ಮಾ. ಜೈ ಕಾಳಿ.

[ಕೈ ಚಪ್ಪಾಳೆ ತಟ್ಟಿಕೊಂಡು ಹಾಡುತ್ತಾ ಕುಣಿಯುತ್ತಾರೆ.]

### ದೃಶ್ಯ ೧೦

[೧೮೭೩ರ ಜೂನ್ ೫, ಫಲಹಾರಿಣೀ ಕಾಳೀ ಪೂಜೆಯ ದಿನ. ಶ್ರೀರಾಮಕೃಷ್ಣರು ತಮ್ಮ ಕೋಣೆಯಲ್ಲಿ ಹೃದಯನಿಗೆ ಹೇಳುತಿದ್ದಾರೆ...]

**ರಾಮಕೃಷ್ಣರು** : ಹೃದಯ್, ನನ್ನ ಕೋಣೆಯಲ್ಲೇ ಪೂಜೆಗೆಲ್ಲಾ ಸಿದ್ಧಮಾಡು. ತಾಯಿ ಕಾಳಿ ಜೀವಿಗಳ ಪೂರ್ವಾರ್ಜಿತ ಕರ್ಮಫಲಗಳನ್ನು ನಿರ್ಮೂಲ ಮಾಡಬಲ್ಲವಳಾದ್ದರಿಂದ ಅವಳಿಗೆ ಫಲಹಾರಿಣೀ ಎಂಬ ಬಿರುದು. ಇಂದು ದಕ್ಷಿಣೇಶ್ವರದ ಕಾಳೀದೇವಿಗೆ ಇಡೀ ರಾತ್ರಿ ವಿಶೇಷ ಪೂಜೆ. ಇಂದು ರಾತ್ರಿ ನಾನಿಲ್ಲೇ ಪೂಜೆಮಾಡುತ್ತೇನೆ.



**ಹೃದಯ್** : ಅದೇನು ವಿಶೇಷ? ಎರಡೆರಡು ಪೂಜೆಯೇ? ಆಯಿತು ಮಾವ.

(ಹೃದಯ ಅಣಿ ಮಾಡುತ್ತಾನೆ.)

**ಹೃದಯ್** : ಮಾವ, ಎಲ್ಲ ಅಣಿ ಮಾಡಿದ್ದೇನೆ. ಇನ್ನು ನಾನು ಕಾಳೀ ದೇವಾಲಯಕ್ಕೆ ಹೋಗುತ್ತೇನೆ. ಅಲ್ಲಿ ನನಗೆ ಕೆಲಸವಿದೆ.

**ರಾಮಕೃಷ್ಣರು** : ಸರಿ, ನಿಮ್ಮ ಅತ್ತೆಯನ್ನು ಇಲ್ಲಿಗೆ ಕಳುಹಿಸಿಬಿಟ್ಟು ಹೋಗು.

**ಹೃದಯ್** : (ಆಶ್ಚರ್ಯದಿಂದ ನೋಡುತ್ತ) ಆಯಿತು ಮಾವ.

[ಶ್ರೀಶಾರದಾದೇವಿಯವರು ಬರುತ್ತಾರೆ. ಶ್ರೀರಾಮಕೃಷ್ಣರು ಅವರನ್ನು ದೇವೀಪೀಠದ ಮೇಲೆ ಕುಳಿತುಕೊಳ್ಳುವಂತೆ ಸಂಜ್ಞೆ ಮಾಡುತ್ತಾರೆ. ಅವರು ಮಂತ್ರಮುಗ್ಧರಂತೆ ಅಲ್ಲಿ ಹೋಗಿ ಕುಳಿತುಕೊಳ್ಳುತ್ತಾರೆ. ಶ್ರೀರಾಮಕೃಷ್ಣರು ಗಂಗಾಜಲವನ್ನು ತಮ್ಮ ಮೇಲೆ, ಶಾರದಾದೇವಿಯವರ ಮೇಲೆ, ಪೂಜಾ ಸಾಮಗ್ರಿಗಳ ಮೇಲೆ ಚಿಮುಕಿಸುತ್ತಾರೆ.]

**ರಾಮಕೃಷ್ಣರು** : ಹೇ, ಜಗನ್ಮಾತೆ, ಕೌಮಾರಿ, ಸರ್ವಶಕ್ತಿಪ್ರದಾಯಿನಿ, ಪವಿತ್ರತಾರೂಪಿಣೀ, ಇವರಲ್ಲಿ ಆವಿರ್ಭವಿಸು. ಸಿದ್ಧಿದ್ವಾರವನ್ನು ತೆರೆ. ಶುಭವನ್ನುಂಟುಮಾಡು. ಮಂಗಳವನ್ನು ಉಂಟುಮಾಡು.

[ಶ್ರೀರಾಮಕೃಷ್ಣರು ಶಾರದಾದೇವಿಯವರಿಗೆ ಷೋಡಶೋಪಚಾರ ಪೂಜೆ ಮಾಡಿ ಕೊನೆಯಲ್ಲಿ ತಮ್ಮ ಸಮಸ್ತ ಸಾಧನೆಯ ಫಲವನ್ನು ಜಪಮಾಲೆಯೊಂದಿಗೆ ದೇವಿಗೆ ಅರ್ಪಿಸುತ್ತಾರೆ.]

**ರಾಮಕೃಷ್ಣರು** :

**ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।**
**ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣೀ ನಮೋಽಸ್ತು ತೇ ॥**

[ಜಪಮಾಲೆಯನ್ನು ಶ್ರೀಶಾರದಾದೇವಿಯವರ ಪದತಲದಲ್ಲಿಟ್ಟು ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಾರೆ.]

**ರಾಮಕೃಷ್ಣರು** : ಅಮ್ಮ, ನನ್ನ ಸಾಧನೆಯ ಫಲವನ್ನೆಲ್ಲಾ ನಿನಗೆ ಅರ್ಪಿಸಿದ್ದೇನೆ. ಸ್ವೀಕರಿಸು.

## ದೃಶ್ಯ ೧೦

[ಶ್ರೀರಾಮಕೃಷ್ಣರ ಅಂತರಂಗ ಶಿಷ್ಯರು ಒಬ್ಬೊಬ್ಬರಾಗಿ ಬರಲಾರಂಭಿಸಿದ್ದಾರೆ. ಅವರುಗಳಿಗೆಲ್ಲ ಶ್ರೀಶಾರದಾದೇವಿಯವರು ಊಟ ಉಪಚಾರ ಮಾಡಿ, ತಮ್ಮ ಮಕ್ಕಳಂತೆ ಭಾವಿಸುತ್ತಿದ್ದಾರೆ. ಈ ಶಿಷ್ಯರಲ್ಲಿ ಲಾಟು ಅಥವಾ ಮುಂದೆ ಸ್ವಾಮಿ ಅದ್ಭುತಾನಂದ ಎಂದು ಹೆಸರಾದ ಹುಡುಗ, ಒಂದು ದಿನ ಪಂಚವಟಿಯಲ್ಲಿ ಧ್ಯಾನ ಮಾಡುತ್ತ ಕುಳಿತಿದ್ದಾನೆ. ಅಲ್ಲಿಗೆ ಶ್ರೀರಾಮಕೃಷ್ಣರು ಬರುತ್ತಾರೆ.]

**ರಾಮಕೃಷ್ಣರು** : ಏ, ಲಾಟು, ಏಳು, ಏಳು.

**ಲಾ** : ಹ್ಞಾ! (ಏಳುವನು).

**ರಾಮಕೃಷ್ಣರು** : ನೋಡು, ನೀನಿಲ್ಲಿ ಯಾವ ದೇವಿಯ ಮೇಲೆ ಧ್ಯಾನ ಮಾಡುತ್ತ ಕುಳಿತಿದ್ದೀಯೋ ಆಕೆ ಅಲ್ಲಿ ಒಬ್ಬಳೇ ಇಷ್ಟೊಂದು ಜನರಿಗೆ ಚಪಾತಿ ಮಾಡುತ್ತಿದ್ದಾಳೆ. ಅವಳ ಸಹಾಯಕ್ಕೆ ಅಲ್ಲಿ ಯಾರೂ ಇಲ್ಲ, ಹೋಗು, ಹೋಗು. ಆಕೆಗೆ ಸಹಾಯ ಮಾಡು.

**ಲಾಟು** : ಆಯಿತು, ಹೋಗುತ್ತೇನೆ. ನೀವು ಹೇಳಿದರೆ ಅದು ವೇದಕ್ಕೆ ಸಮಾನ.

## ದೃಶ್ಯ ೧೧

[ರಾಖಾಲ್, ಲಾಟು, ಬಾಬುರಾಮ್, ಗೋಪಾಲ್ ದಾದಾ ಮಾತನಾಡುತ್ತಿದ್ದಾರೆ. ಅಲ್ಲಿಗೆ ರಾಮಕೃಷ್ಣರು ಬರುತ್ತಾರೆ.]

**ರಾಮಕೃಷ್ಣರು** : ರಾಖಾಲ್, ನಿಮ್ಮದೆಲ್ಲಾ ಊಟ ಆಯಿತೆ?

**ರಾಖಾಲ್** : ಇದೀಗ ಆಯಿತು.

**ರಾಮಕೃಷ್ಣರು** : ರಾಖಾಲ್, ನೀನೆಷ್ಟು ಚಪಾತಿ ತಿಂದೆ? (ರಾಖಾಲ್ ತಲೆ ತಗ್ಗಿಸುತ್ತಾನೆ.)

**ರಾಮಕೃಷ್ಣರು** : ಏಕೆ? ನಿನಗೆ ನಾಲ್ಕು ಚಪಾತಿ ತಿನ್ನು ಎಂದಿದ್ದೆ. ನೀನೆಷ್ಟು ಚಪಾತಿ ತಿಂದೆ? ಹ್ಞೂ, ಹೇಳು.

**ರಾಖಾಲ್**: ನಾನು ಆರು ಚಪಾತಿ ತಿಂದೆ ಠಾಕೂರ್.

**ರಾಮಕೃಷ್ಣರು** : ನೀನು ಸಾಧಕ! ನಿನಗೆ ನಾನು ನಾಲ್ಕು ಮಾತ್ರ ತಿನ್ನು ಎಂದು ಹೇಳಿರಲಿಲ್ಲವೇ?

**ರಾಖಾಲ್**: ಹೌದು.

**ರಾಮಕೃಷ್ಣರು** : ಮತ್ತೇಕೆ ಆರು ತಿಂದೆ?

**ರಾಖಾಲ್**: ಮಾತೆಯವರು ಒತ್ತಾಯ ಮಾಡಿದರು, ಠಾಕೂರ್.

**ರಾಮಕೃಷ್ಣರು**: ಏಕೆ, ಅವರಿಗೂ ನಾನು ಹೇಳಿದ್ದೆನಲ್ಲ. ಸರಿ, ಲಾಟು, ನೀನೆಷ್ಟು ತಿಂದೆ?

**ಲಾಟು** : (ತಲೆ ತಗ್ಗಿಸಿ) : ನಾನೂ ಆರು ತಿಂದೆ ಠಾಕೂರ್.

**ರಾಮಕೃಷ್ಣರು** : ನಾನು ನಿನಗೆಷ್ಟು ತಿನ್ನಲು ಹೇಳಿದ್ದೆ?

**ಲಾಟು** : ಐದು.

**ರಾಮಕೃಷ್ಣರು** : ಮತ್ತೇಕೆ ಒಂದು ಹೆಚ್ಚು ತಿಂದೆ?

**ಲಾ** : ಮಾತೆಯವರು ವಿಶ್ವಾಸದಿಂದ ಹಾಕಿದ್ದನ್ನು ಬಿಸಾಡಲು ಆಗಲಿಲ್ಲ, ಠಾಕೂರ್.

**ರಾಮಕೃಷ್ಣರು**: ಸರಿ, ಸರಿ, ಗೋಪಾಲ್‌ದಾ, ಬಾಬುರಾಮ ನಿಮ್ಮಿಬ್ಬರಿಗೂ ನಾಲ್ಕು ನಾಲ್ಕು ತಿನ್ನಲು ಹೇಳಿದ್ದೆನಲ್ಲ, ನೀವೆಷ್ಟು ತಿಂದಿರಿ?

(ಇಬ್ಬರೂ ತಲೆ ತಗ್ಗಿಸಿ) : ಆರು, ಆರು ತಿಂದೆವು ಗುರುದೇವ.

**ರಾಮಕೃಷ್ಣರು** : ಏನು! ಆರು ಚಪಾತಿ ತಿಂದಿರಾ? ಏಕೆ ನನ್ನ ಮಾತು ಮೀರಿದಿರಿ?

**ಬಾಬುರಾಮ್** : ತಾಯಿಯವರು ಪ್ರೀತಿಯಿಂದ ಬಡಿಸಿದ್ದನ್ನು ಬೇಡ ಎನ್ನಲಾಗಲಿಲ್ಲ ಠಾಕೂರ್.

**ರಾಮಕೃಷ್ಣರು** : ಸರಿ, ಸರಿ. ಎಲ್ಲಿ, ಲಾಟು ಹೋಗು, ಅವರನ್ನು ಕರೆ.

[ಲಾಟು ಹೋಗುತ್ತಾನೆ. ಶಾರದಾದೇವಿಯವರನ್ನು ಕರೆತರುತ್ತಾನೆ.]

**ಶಾರದಾದೇವಿ** : ಕರೆದರಂತಲ್ಲ, ಏನು?

**ರಾಮಕೃಷ್ಣರು.** : ಅಲ್ಲ, ನಾನು ಒಬ್ಬೊಬ್ಬರಿಗೂ, ಎಷ್ಟೆಷ್ಟು ಚಪಾತಿ ಕೊಡಬೇಕೆಂದು ನಿಮಗೆ ಹೇಳಿದ್ದೆನಲ್ಲ. ಏಕೆ, ಅವರಿಗೆ ಬಲವಂತ ಮಾಡಿ ಜಾಸ್ತಿ ಬಡಿಸಿದಿರಿ?

**ಶಾರದಾದೇವಿ** : ಅದರಿಂದೇನಾಯಿತು? ಒಂದೆರಡು ಚಪಾತಿ ಜಾಸ್ತಿ ತಿಂದರೆ ಏನಾಗುತ್ತದೆ?

**ರಾಮಕೃಷ್ಣರು**: ಇದರಿಂದ ಅವರ ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯಾಗುತ್ತದೆ. ಹೊಟ್ಟೆ ತುಂಬಿದರೆ, ಧ್ಯಾನ ಮಾಡಲಾಗದೆ, ನಿದ್ದೆ ಮಾಡುತ್ತಾರೆ. ಆದ್ದರಿಂದಲೇ ಅವರಿಗೆಲ್ಲಾ ಇಷ್ಟಿಷ್ಟೇ ತಿನ್ನಬೇಕೆಂದು ಹೇಳಿದ್ದೆ.

**ಶಾರದಾದೇವಿ** : ಅಷ್ಟೇ ತಾನೆ, ಅದಕ್ಕೇಕೆ ಇಷ್ಟು ಕಳವಳ ಪಡುತ್ತೀರಿ? ಮಕ್ಕಳು ಊಟಕ್ಕೆ ಕುಳಿತಾಗ, ಅವರಿಗೆ ಅರೆಹೊಟ್ಟೆ ಹೇಗೆ ಹಾಕಲಿ? ನೀವೇನೂ ಚಿಂತಿಸಬೇಡಿ. ನಾನು ಅವರ ಆಧ್ಯಾತ್ಮಿಕ ಜೀವನದ ಜವಾಬ್ದಾರಿ ಹೊರುತ್ತೇನೆ. ಅವರೆಲ್ಲರೂ ಆಧ್ಯಾತ್ಮಿಕ ಜೀವನದಲ್ಲಿ ಉನ್ನತ ಮಟ್ಟಕ್ಕೆ ಏರುತ್ತಾರೆ.

**ರಾಮಕೃಷ್ಣರು**: ಭೇಷ್, ನೀವೇ ಅವರ ಜವಾಬ್ದಾರಿ ಹೊತ್ತಮೇಲೆ, ನನಗದರ ಚಿಂತೆಯಿಲ್ಲ ಬಿಡಿ.

(ಮುಂದುವರಿಯುವುದು)

# ಹೃದಯಸಂಪನ್ನತೆ

## (ವಿಮರ್ಶಾ ಲೇಖನ)

❖ ಡಾ. ಎಚ್. ಪಾಂಡುರಂಗ ವಿಠಲ, ಕನ್ನಡ ಉಪನ್ಯಾಸಕರು, ಮೈಸೂರು

**ಹೃದಯಸಂಪನ್ನತೆ**
**ಲೇಖಕರು: ಆರ್. ಕೆ. ಶ್ರೀಕಂಠಕುಮಾರಸ್ವಾಮಿ**
**ಪ್ರಕಾಶಕರು: 'ಅಭಿಜ್ಞಾನ' ನಂ.7-8, ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ಆವರಣ, ಬಸವನಗುಡಿ ರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು 560 019**
**ಪುಟಗಳು: 110 ಬೆಲೆ: ರೂ. 60/-**

ವೇದಮಂತ್ರ ಪಠಣ, ಕರ್ಮಾನುಷ್ಠಾನುಗಳ ಪಾರಮ್ಯದ ಬಗ್ಗೆ ಅಪಾರವಾದ ಶ್ರದ್ಧೆಯುಳ್ಳ ಕರ್ಮಠರೊಬ್ಬರು ಹೃದಯ ಸಂಪನ್ನ ವ್ಯಕ್ತಿಗಳ ಅಂತರಂಗವನ್ನು ಅರಿತು, ಅವರ ಸ್ನೇಹ, ಅನುಗ್ರಹಗಳಿಗೆ ಪಾತ್ರರಾಗಿ ಕ್ರಮೇಣ ಹೃದಯವೈಶಾಲ್ಯವನ್ನು ಗಳಿಸಿದ ಅನುಭವಕಥನ ಇದು.

ಸಾತ್ವಿಕ ಸಜ್ಜನಿಕೆಯ ಪರಿಧಿಯಲ್ಲಿ ಸತ್ವಪೂರ್ಣ ವ್ಯಕ್ತಿತ್ವದ ಸಾರ್ಥಕ ಬದುಕಿನ ಸ್ವರೂಪವನ್ನು ಬಾಳಿ ಬದುಕಿ ತೋರಿಸಿ ಕೊಟ್ಟ ಹಳೆಯ ತಲೆಮಾರಿನ ಚೇತನಗಳ ಚಿತ್ರಗಳು ಎಲ್ಲ ಕಾಲಕ್ಕೂ ಮಾದರಿ. ಇಲ್ಲಿ ಚಿತ್ರಿತವಾಗಿರುವ ಇಂತಹ ಪ್ರತಿ ವ್ಯಕ್ತಿಗಳ ಹತ್ತಿರದ ಒಡನಾಟದ ಅನುಭವ ಸಾಂದ್ರತೆ ಹಸಿ ಗೋಡೆಗೆ ಹರಳಿಟ್ಟಂತೆ ಮೂಡಿಬಂದು ಬೆರಗುಗೊಳಿಸುತ್ತದೆ. ನದಿಯ ಸಹವಾಸ ಬಯಸುವ ಕಿರುತೊರೆಯಂತೆ ಲೇಖಕರು ಆರಂಭಿಕವಾಗಿ ಕಂಡು, ಅಂತಿಮವಾಗಿ ನದಿಯೇ ಆದ ಪ್ರತಿಭಾಸಂಪನ್ನತೆ, ಪ್ರಸನ್ನತೆ ಎದ್ದು ಕಾಣುತ್ತದೆ.

ಬೆಳಗೆರೆ ಕೃಷ್ಣಶಾಸ್ತ್ರಿಗಳ 'ಮರೆಯಲಾದೀತೆ' ಕೃತಿಯಂತೆ ಈ ಕೃತಿಯೂ ಕೂಡ ಓದುಗನ ಮನಸೆಳೆದು ಮಾನವೀಯತೆಯ ಸಂಸ್ಕಾರ ನೀಡುತ್ತದೆ. ಅಲ್ಲಿನದು ಸಾಮಾಜಿಕ ಕಾರ್ಯಗಳಲ್ಲಿ ಪ್ರೇರಣೆ, ಒತ್ತಾಸೆ ನೀಡಿದ ವ್ಯಕ್ತಿ ಚೈತನ್ಯಗಳ ಚಿತ್ರವಾಗಿದ್ದರೆ ಇಲ್ಲಿನವು ವೇದಾಧ್ಯಯನ, ವೈಯಕ್ತಿಕ ಶ್ರದ್ಧೆ, ಸಂಸ್ಕಾರಗಳಿಗೆ ಸಂಬಂಧಪಟ್ಟವು. ಭಾರತೀಯ ಸಂಸ್ಕೃತಿಯ, ವೇದವಾಙ್ಮಯದ ಪರಿಚಯವೂ ಗುಪ್ತಗಾಮಿನಿಯಾಗಿ ಇಲ್ಲಿ ಇದೆ.

ಇದರಲ್ಲಿನ ಅನುಭವ ಚಿತ್ರಗಳನ್ನು ಮೂರುಭಾಗವಾಗಿ ನೋಡಬಹುದು. ಲೇಖಕರಿಗೆ ಗುರುಸ್ಥಾನದಲ್ಲಿದ್ದು ಸರ್ವ ವಂದ್ಯರಾದ ಕೇಶವಮೂರ್ತಿ ಘನಪಾಠಿಗಳು, ಶೃಂಗೇರಿ ಜಗದ್ಗುರುಗಳು, ವಾಹುಲಿ ಗೋಪಾಲಾಚಾರ್ಯರು, ತೆನ್ನಂತೋಟಂ ಯಜ್ಞನಾರಾಯಣ ದೀಕ್ಷಿತರು—ಇವರ ಜತೆಗಿನ ಒಡನಾಟದಿಂದ ಲೇಖಕರು ತಮ್ಮ ಹೃದಯ ಸಂಪನ್ನತೆಯನ್ನು ಗಳಿಸಿಕೊಂಡು ಜೀವನದ ಗುರಿಗಳನ್ನು ಸ್ಪಷ್ಟಮಾಡಿಕೊಂಡದ್ದನ್ನು ತಿಳಿಸುತ್ತಾರೆ. ಶೃಂಗೇರಿ ಜಗದ್ಗುರುಗಳು "ಕುಮಾರಸ್ವಾಮಿ! ವ್ಯಾಖ್ಯಾನಪೀಠದಲ್ಲಿ ಕೂತು ಹೇಳುತ್ತಿದ್ದೇನೆ ಕಣ್ರೀ. ಶ್ರದ್ಧಾಭಕ್ತಿಯಿಂದ ವೇದವನ್ನು ಕಲಿಯಬೇಕು ಎಂದು ಯಾರು ಬಂದರೂ ಹೇಳಿಕೊಡೀಪ್ಪಾ! ಅವರಿಗೆ ಶಿಖೆ ಇರಲಿ ಇಲ್ಲದಿರಲಿ, ಜನಿವಾರ ಇರಲಿ ಇಲ್ಲದೆ ಹೋಗಲಿ. ರಾತ್ರಿ ಹನ್ನೆರಡು ಘಂಟೆ, ಒಂದು ಘಂಟೆಗೆ ಬರಲಿ, ಚಿಂತೆಯಿಲ್ಲ, ಹೇಳಿಕೊಡಿ. ನಾನು ಹೇಳುತ್ತಿದ್ದೇನೆ, ಧೈರ್ಯವಾಗಿ ನಿಮ್ಮ ಕೆಲಸ ಮಾಡಿ" ಎಂದು ಹೇಳುವಾಗ ಅವರ ಹೃದಯ ವೈಶಾಲ್ಯ ಅಚ್ಚರಿ ತರುತ್ತದೆ. ಲೇಖಕರಿಗೆ ಸಂಹಿತಾ ಪಾಠ ಮಾಡಿಸುತ್ತಿದ್ದ ತೆನ್ನಂತೋಟಂ ಯಜ್ಞನಾರಾಯಣ ದೀಕ್ಷಿತರು ಕಾಲರಾದಿಂದ ಮಗ ತೀರಿಕೊಂಡ ದುಃಖದಲ್ಲೂ "... ಅದಕ್ಕಿಂತ ಹೆಚ್ಚಾಗಿ ನಿನಗೆ ಹತ್ತು ದಿನಗಳು ಪಾಠ ತಪ್ಪಿ ಹೋಯಿತಲ್ಲಾ ಎಂದು ತುಂಬಾ ದುಃಖವಾಗುತ್ತಿದೆ" ಎಂದು ಹೇಳುವ ಪ್ರಸಂಗ ನಮ್ಮ ಕಣ್ಣಲ್ಲೂ ನೀರುಕ್ಕಿಸುತ್ತದೆ.

ಲೇಖಕರ ತಂದೆತಾಯಿಯರು, ಗಂಗಾಧರಯ್ಯನವರ ಮನೆಯವರು, ಸಾವಿತ್ರಮ್ಮನವರು ಮೊದಲಾದ ಸಾಧಾರಣರಾದ ಆದರೆ ಅಸಾಧಾರಣ, ಉದಾತ್ತ ವ್ಯಕ್ತಿಗಳಿಗೆ ಸಂಬಂಧಿಸಿದವು ಎರಡನೆಯ ರೀತಿಯ ಪ್ರಸಂಗಗಳು. ಹೊರಗಡೆ ಏನೂ ತಿನ್ನಬಾರದೆಂಬ, ಸಂಧ್ಯಾವಂದನೆ ಆಹ್ನಿಕ ಮೊದಲಾದುವನ್ನು ನಿಯಮ ಮಾಡಿಕೊಂಡ ಲೇಖಕರ ವೈದಿಕ ಜೀವನಕ್ಕೆ ಇತರರು ತೋರುವ ಆದರ, ಗೌರವ; ತಮಗೆ ಎಷ್ಟೇ ತೊಂದರೆಯಾದರೂ ಅತಿಥಿ ಸತ್ಕಾರಕ್ಕೆ ಪ್ರಾಮುಖ್ಯ ನೀಡುವ ಗೃಹಿಣಿಯರು; ಇದೇ ವೈಶ್ವದೇವ, ಹೋಮಗಳಿಗಿಂತ ಪುಣ್ಯತಮವಾದುದೆಂದು ಹೇಳುವ ಘನಪಾಠಿಗಳು; ಶವ ಇರುವವರೆಗೆ ನೆರೆಮನೆಯವರಿಗೆ ಊಟಮಾಡಲಾಗದೆಂದು, ಲೇಖಕರ ಅಜ್ಜಿ ತಮ್ಮ ಮಗನ ಶವವನ್ನು ತಾವೇ ಹೊತ್ತೊಯ್ದು, ಇನ್ನೊಬ್ಬ ಮಗ ಭಯ ಪಟ್ಟಾನೆಂದು ಸ್ಮಶಾನದ ಹೊರಗೇ ನಿಲ್ಲಿಸಿ, ಶವಸಂಸ್ಕಾರ ಮಾಡಿ ಬಂದುದು—ಇಂಥ ಅಪರೂಪದ ಚಿತ್ರಗಳು ಮನಸ್ಸಿನಲ್ಲಿ ನೆಲೆನಿಲ್ಲುತ್ತವೆ. ಇವು ಒಂದು ಜಾತಿಯ ಶ್ರೇಷ್ಠತೆಯನ್ನು ಬಿಂಬಿಸುವ ಪ್ರಸಂಗಗಳಲ್ಲ—ನಿಜವಾದ ಧಾರ್ಮಿಕ ಮೌಲ್ಯದ ಚಿತ್ರಗಳು.

ಮೂರನೆಯ ಬಗೆಯ ಲೇಖನಗಳು ಲೇಖಕರ

ಉದ್ಯೋಗ ಪರಿಸರದಲ್ಲಿನ ಅನುಭವಗಳು. ತಂದೆಯವರಿಂದ ಕೇಳಿದ 'ನಿಸ್ವಾರ್ಥ ಪರೋಪಕಾರದ ಮಹಿಮೆ', ರೀಡರ್ಸ್ ಡೈಜೆಸ್ಟಿನಲ್ಲಿ ಓದಿದ 'ಕೃತಜ್ಞತೆಯ ಪರಾಕಾಷ್ಠೆ' ಎಂಬ ಕತೆ—ಇತ್ಯಾದಿ. ಇವೆಲ್ಲ ಚೆನ್ನಾಗಿ ಓದಿಸಿಕೊಳ್ಳುತ್ತವೆ. ಹಿರಿಯ ಸ್ಥಾನದಲ್ಲಿರುವವರು ಕೈಕೆಳಗಿನವರನ್ನು ಸಮಾನ ದೃಷ್ಟಿಯಿಂದ ಕಂಡಾಗ ಅವರ ಆದರ, ನಂಬಿಕೆಗೆ ಪಾತ್ರರಾಗುತ್ತಾರೆ. ೨೦ ವರ್ಷಗಳಿಂದಲೂ ಬ್ಲಾಸ್ಟ್ ಫರ್ನೆಸ್ ಕೆಲಸಗಾರರಲ್ಲಿ ೪-೫ ಜನ ಬ್ರಾಹ್ಮಣ ಕೆಲಸಗಾರರು ತಾವು ಚೆನ್ನಾಗಿ ಹಾಲು ಹಾಕಿದ ಸ್ಟ್ರಾಂಗ್ ಕಾಫಿ ಕುಡಿದು ಉಳಿದವರಿಗೆ ನೀರುಕಾಫಿ ಕೊಡುತ್ತಿದ್ದ ಅನ್ಯಾಯವನ್ನು ಸಹಿಸದೆ ಅವರನ್ನು ತರಾಟೆಗೆ ತೆಗೆದುಕೊಂಡಿದ್ದು ಸಣ್ಣ ಘಟನೆಯಿರಬಹುದು. ಆದರೆ ಇದರಿಂದ ಇಡೀ ಕಾರ್ಖಾನೆಯ ಕಾರ್ಮಿಕರ ವಿಶ್ವಾಸ ಲೇಖಕರಿಗೆ ದಕ್ಕುತ್ತದೆ.




ಮಡಿ-ಮೈಲಿಗೆ, ಊಟಮಾಡುವಲ್ಲಿ ನಿರ್ಬಂಧಗಳು, ಪುಣ್ಯಾಹ, ಸ್ನಾನಗಳು—ಇಂತಹವನ್ನೆ ಮುಖ್ಯವಾಗಿಸಿಕೊಂಡ ಹಿಂದೂಗಳ ಮಡಿವಂತಿಕೆಯ ಧರ್ಮ ಕೇವಲ ಚರ್ಮದ ಆಳದಷ್ಟೆ (skin deep) ಎಂದು ಸ್ವಾಮಿ ವಿವೇಕಾನಂದರು ಹಾಸ್ಯ ಮಾಡುತ್ತಾರಷ್ಟೆ. ಹಿಂದೆ ಹೀಗೇ ಇದ್ದ ಲೇಖಕರು ಅನಂತರ ಉದಾರಚರಿತರ ಒಡನಾಟದಿಂದ ಉದಾತ್ತ ಹೃದಯಸಂಪನ್ನರಾಗಿ, ನಮ್ಮ ಸಂಸ್ಕೃತಿಯಲ್ಲಿನ ಔದಾರ್ಯ ಪೂರ್ಣ ವಿಚಾರಗಳಿಗೆ ಅನೇಕ ಆಧಾರಗಳನ್ನು ನೀಡುತ್ತಾರೆ: "... ಉಪವಾಸ, ಜಾಗರಣೆ, ದೇಹಶೋಷಣಾದಿಗಳು, ಯದ್ಯಪಿ, ಉತ್ತಮ ಸಾಧನಗಳೆನಿಸಿಕೊಂಡರೂ, ಅವು ಕೇವಲ ಸಾಧನೆಗಳೇ ಹೊರತು ಸ್ವತಂತ್ರ ಫಲಕಾರಿಗಳಲ್ಲ.... ಭಾಗವತಕಾರರು ಅವುಗಳನ್ನು 'ಪ್ರವೃತ್ತಿ ಸಂಕೋಚ' ಪ್ರಯತ್ನಗಳೆಂದು ಕರೆಯುತ್ತಾರೆ. ಪ್ರವೃತ್ತಿಯೇ ಸ್ವಭಾವವಾಗಿರುವ ನಮ್ಮ ಇಂದ್ರಿಯಗಳನ್ನು ನಿವೃತ್ತಿಮಾರ್ಗದ ಕಡೆಗೆ ತಿರುಗಿಸಲು ಮೊದಲು ಮಾಡಬೇಕಾದದ್ದು 'ಪ್ರವೃತ್ತಿ ಸಂಕೋಚ'... ಒಂದೇ ಸಾರಿ ಪ್ರವೃತ್ತಿಯನ್ನು ತಡೆಗಟ್ಟುವುದು ಬಹಳ ಕಷ್ಟ. ಬಲಾತ್ಕಾರ ಮಾಡಿದರೂ ಅಲ್ಲಿಯೇ ನಿಲ್ಲಲಾರದು. ಆದ್ದರಿಂದ ಸ್ವಲ್ಪ ಸ್ವಲ್ಪವಾಗಿ ಕಡಿಮೆ ಮಾಡುತ್ತಾ ಹೋಗಬೇಕು... ಇದನ್ನೇ ಯಜುರ್ವೇದದ ಕೂಷ್ಮಾಂಡಹೋಮ ಪ್ರಕರಣದಲ್ಲಿ—**ಯದಿ ಮನ್ಯೇತೋಪದಸ್ಯಾಮೀತಿ । ಓದನಂ ಧಾನಾಃ ಸಕ್ತೂನ್ ಘೃತಮಿತ್ಯನುವ್ರತಯೇತ್। ಆತ್ಮನೋಽನುಪದಾಸಾಯ** ॥ ಎಂದು ವೇದಮಾತೆ ಹೇಳುತ್ತಿದ್ದಾಳೆ... ಕೂಷ್ಮಾಂಡ ಹೋಮ ಮಾಡುವುದು ಪ್ರಧಾನ. ಅದಕ್ಕೆ ಕೇವಲ ಹಾಲು ಕುಡಿದುಕೊಂಡು, ಉಪವಾಸ ಇರುವುದು ಒಂದು ಸಣ್ಣ ಅಂಗ (ಶ್ರದ್ಧಾ ದ್ಯೋತಕ). ಆದರೆ ಆ ತರಹ ಉಪವಾಸದಿಂದ ಶರೀರ ಶೋಷಣೆಯಾಗಿ, ಹೋಮವನ್ನೇ ಮಾಡಲು ಸಾಧ್ಯವಿಲ್ಲ ಎನ್ನುವುದಾದರೆ, ಏನಾದರೂ ಆಹಾರ ತೆಗೆದುಕೊಂಡಾದರೂ ಮಾಡಬೇಕು ಎಂಬುದೇ ವೇದತಾತ್ಪರ್ಯ." ಹೋಮದಿಂದ ಪ್ರಯೋಜನವೇ ಹೊರತು ಉಪವಾಸದಿಂದಲ್ಲ. ಇವತ್ತು ಉಪವಾಸ ಅಂದರೆ ಹೊಟ್ಟೆಗೆ ಏನೂ ಹಾಕದೇ ಇರುವುದೇ ಪುಣ್ಯ ಎಂದುಕೊಂಡಿದ್ದೇವೆ. ರಾತ್ರಿಯೆಲ್ಲ ಕಣ್ಣು ಬಿಟ್ಟುಕೊಂಡು ಇದ್ದುಬಿಟ್ಟರೆ ಜಾಗರಣೆ ಪುಣ್ಯ ಎಂದು ತಿಳಿದುಕೊಂಡಿರುವ ನಾವು, ಈ ಭ್ರಮೆಯಿಂದ ಮುಕ್ತರಾಗಿ ನಿಜವಾದ ವೈದಿಕ ಸಂಸ್ಕೃತಿಯನ್ನು ಅಭ್ಯಾಸ ಮಾಡಲು ಕಲಿಯಬೇಕಲ್ಲವೇ!

"... ಇದನ್ನೇ ತೈತ್ತಿರೀಯಾರಣ್ಯಕದಲ್ಲಿ ಬ್ರಹ್ಮಯಜ್ಞ ಪ್ರಕರಣದಲ್ಲಿ ಅಂಗಲೋಪವಾಗುತ್ತದೆಂದು ಹೇಳಿ ಪ್ರಧಾನಕ್ಕೆ ಲೋಪ ಮಾಡಬಾರದೆಂಬ, ಅದ್ಭುತವಾದ ನ್ಯಾಯವನ್ನು ಶ್ರುತಿಮಾತೆಯು ಅನೇಕ ಮಾತುಗಳಲ್ಲಿ ಹೇಳಿದ್ದಾಳೆ. ಇದೇ ನಮ್ಮ ಸಂಸ್ಕೃತಿಯ ಔದಾರ್ಯ."

ಆಧುನಿಕ ಸಮಯದಲ್ಲಿ ವೈದಿಕ ಮನೋಧರ್ಮವನ್ನು ಹೇಗೆ ಕಾಪಾಡಿಕೊಂಡು ಬರಬೇಕೆಂಬುದಕ್ಕೆ ಸೂಕ್ತವಾದ ಸಲಹೆಗಳನ್ನು ಸೂಚ್ಯವಾಗಿ ಈ ಕೃತಿ ತಿಳಿಸುತ್ತದೆ. ಲೇಖಕರು ಲೋಹಶಾಸ್ತ್ರಜ್ಞರಾಗಿದ್ದು ವೇದಪಠಣದಲ್ಲೂ ಆಸಕ್ತಿ ಹೊಂದಿರುವುದು ಸ್ತುತ್ಯವೇ ಆಗಿದ್ದರೂ, ಎರಡನೆಯದೇ ಮೇಲೆಂಬ ಅಭಿಪ್ರಾಯವನ್ನು ಬಿಂಬಿಸಲು ಪ್ರಯತ್ನಿಸಿರುವಂತೆ ಕೆಲವೆಡೆ ಭಾಸವಾಗುತ್ತದೆ. ಲೇಖಕರು ಪ್ರತಿ ಪ್ರಸಂಗದಲ್ಲೂ ತಾವೇ ಪಾತ್ರ ವಹಿಸಿರುವುದರಿಂದ ಪರಿಚಯಿಸುವ ವ್ಯಕ್ತಿತ್ವವನ್ನು ವಸ್ತುನಿಷ್ಠವಾಗಿ ಚಿತ್ರಿಸಲಾಗಿಲ್ಲ—ಇದು ಪರಿಮಿತಿಯಾದರೂ, ಆತ್ಮೀಯತೆಯ ಸೊಗಡನ್ನೂ ತಂದುಕೊಟ್ಟಿದೆ. ಪಾಶ್ಚಾತ್ಯರ ಒಡನಾಟದ ಚಿತ್ರಗಳು ತೀರ ಸಾಧಾರಣ; ಬಿಡಬಹುದಿತ್ತು. ರೀಡರ್ಸ್ ಡೈಜೆಸ್ಟ್ ಕತೆಯಂತೂ ಕಕ್ಷೆಯಿಂದ ಹೊರಗುಳಿಯುತ್ತದೆ. ಒಟ್ಟಿನಲ್ಲಿ ತಾವು ಗಳಿಸಿದ ಅಂತರಂಗ ಸಂಸ್ಕಾರವನ್ನು ಸಹೃದಯರ ಜತೆಗೆ ಹಂಚಿಕೊಳ್ಳುವ ಲೇಖಕರ ಉದ್ದೇಶ ಸಾರ್ಥಕವಾಗಿದೆ. ಇಂತಹ ಪುಸ್ತಕಗಳು ಅವರಿಂದ ಇನ್ನಷ್ಟು ಬರಲಿ ಎಂದು ಕಾಯುವಂತಾಗಿದೆ. ✡